

## ಬಜ್/ವಿಫಲ್ ಕಟ್

ಮಿಲಿಟರಿ ಕಟಿಂಗ್‌ನ ರೂಪದಂತೆ ಕಾಣುವ ಬಜ್ ಕಟ್‌ನಲ್ಲಿ ತಲೆಯ ಮೇಲ್ಭಾಗದ ಕೂದಲನ್ನು ಅಭಿರುಚಿಗೆ ಅನುಗುಣವಾಗಿ ಹೇರ್ ಕಲರಿಂಗ್ ಮಾಡಬಹುದು. ತಲೆಯ ಎರಡೂ ಬದಿಯ ಕೂದಲನ್ನು ನುಣುಪಾಗಿ ಕತ್ತರಿಸಿ ಅದಕ್ಕಿಂತ ಕೊಂಚ ಉದ್ದವಾಗಿ ಮೇಲ್ಭಾಗದಲ್ಲಿ ಕೂದಲು ಬಿಡಲಾಗುತ್ತದೆ. ನಂತರ ಎಡ–ಬಲ ಬದಿಯಲ್ಲಿ ನಾನಾ ರೀತಿಯ ಮಾರ್ಕ್‌ಗಳನ್ನು ಮಾಡಿದರೆ ಬಜ್ ಕಟ್ ಸೂಪರ್ ಆಗಿ ಕಾಣುತ್ತದೆ. ತಲೆಯಲ್ಲಿ ಆಗುವ ಹೇನುಗಳ ಉಪಟಳವನ್ನು ತಡೆಗಟ್ಟಲು ಮಿಲಿಟರಿ ಕಟ್ ಜೊತೆಗೆ ಬಜ್ ಕಟ್ ಅನುಕೂಲ. ಈ ವಿಧಾನವು ರೌಂಡ್ ಮತ್ತು ಚೌಕಾಕಾರದ ಮುಖವುಳ್ಳವರಿಗೆ ಹೆಚ್ಚು ಸೂಕ್ತ.

## ವಿ ಕಟ್

ಹೆಸರೇ ಸೂಚಿಸುವಂತೆ ಇಂಗ್ಲಿಷ್‌ನ ವಿ ಅಕ್ಷರದ ರೂಪದಲ್ಲಿ ತಲೆಯ ಹಿಂಭಾಗದಲ್ಲಿ ಕೂದಲು ಕತ್ತರಿಸಿ ಅದಕ್ಕೆ ಸ್ಟೈಲಿಶ್ ಲುಕ್ ನೀಡುವುದೇ ವಿ ಕಟ್. ತಲೆಯ ಮೇಲ್ಭಾಗದಲ್ಲಿ ಹುಡುಗರ ಇಷ್ಟದಂತೆ ಉದ್ದ, ಮಧ್ಯಮ ಹಾಗೂ ಗಿಡ್ಡವಾಗಿ ಕೂದಲು ಬಿಟ್ಟು ಎಡ ಮತ್ತು ಬಲ ಭಾಗದಲ್ಲಿ ತೆಳುವಾಗಿ ಕತ್ತರಿಸಲಾಗುತ್ತದೆ. ತಲೆಯ ಹಿಂಭಾಗದ ಕೂದಲನ್ನು ನಿಖರವಾಗಿ ವಿ ಆಕಾರ ಬರುವಂತೆ ನೆಕ್‌ಲೈನ್‌ನಲ್ಲಿ ಕತ್ತರಿಸಿ ಅದಕ್ಕೊಂದಿಷ್ಟು ಅಲಂಕಾರದ ರೂಪ ನೀಡುವುದು ಈ ಹೇರ್‌ಸ್ಟೈಲ್‌ನ ವಿಶೇಷ.

## ಮಿಲಿಟರಿ/ಆರ್ಮಿ ಕಟ್

ಆರ್ಮಿ ಕಟ್ ಯುವ ಪೀಳಿಗೆಗೆ ಹೊಸತೇನಲ್ಲ. ನೂರಾರು ವರ್ಷಗಳಿಂದ ಚಾಲ್ತಿಯಲ್ಲಿದ್ದರೂ ಈಗಿನ ಹುಡುಗರು ಹೆಚ್ಚಾಗಿ ಆರ್ಮಿ ಕಟ್‌ಗೆ ಮಾರುಹೋಗುತ್ತಿದ್ದಾರೆ. ಕೆಲವೊಮ್ಮೆ ಆರ್ಮಿ ಮೇಲೆ ಉಂಟಾಗುವ ಕ್ರೇಜ್‌ನಿಂದಾಗಿಯೂ ಆರ್ಮಿ ಕಟ್‌ಗೆ ಹುಡುಗರು ದುಂಬಾಲು ಬೀಳುತ್ತಾರೆ. ಈ ಕೇಶವಿನ್ಯಾಸವು ಹೆಚ್ಚು ಹೊಳಪಾಗಿ ಕಾಣಲು ನಾನಾ ರೀತಿಯ ಜೆಲ್ ಬಳಸಲಾಗುತ್ತದೆ.

## ಬ್ಲೆಂಡೆಡ್ ಕಟ್

ಸಾಕಷ್ಟು ಮಂದಿ ಯುವಕರು ಬ್ಲೆಂಡೆಡ್ ಹೇರ್‌ಕಟ್‌ಗೆ ಮಾರುಹೋಗಿದ್ದು, ಈ ಕೇಶ ವಿನ್ಯಾಸ ಮಾಡಿಸಿಕೊಂಡು ಮಿಂಚುತ್ತಾರೆ. ತಲೆಯ ಎರಡೂ ಬದಿಯಲ್ಲಿ ಇಳಿಜಾರಿನಂತೆ ಕೂದಲನ್ನು ಕತ್ತರಿಸಿ, ತಲೆಯ ಮೇಲ್ಭಾಗದಲ್ಲಿ ಹೆಚ್ಚು ಕೂದಲನ್ನು ಬಿಡುವುದು ಬ್ಲೆಂಡೆಡ್ ಕಟ್‌ನ ವಿಧಾನ. ತಲೆಗೂದಲಿಗೆ ಆಗಾಗ ಕೈಬೆರಳುಗಳನ್ನು ಸೇರಿಸಿ ಕೂದಲನ್ನು ನೇವರಿಸುವುದು ಯುವಕರಿಗೆ ಇಷ್ಟವಾದದ್ದು. ಇದಕ್ಕೆ ಪೂರಕವಾಗಿ ತಲೆಗೂದಲನ್ನು ನೇವರಿಸುವುದಕ್ಕೆ ಬ್ಲೆಂಡೆಡ್ ಕಟ್ ಪೂರಕವಾಗಿದೆ. ಇದರಲ್ಲೂ ತಲೆಯ ಮೇಲ್ಭಾಗದ ಕೂದಲನ್ನು ಉದ್ದ, ಮಧ್ಯಮ, ಗಿಡ್ಡವಾಗಿ ಬಿಡುವ ಹಲವು ವಿಧಾನಗಳಿವೆ.


ಕೆಜಿಎಫ್ ಕಟ್

## ಕೆಜಿಎಫ್ ಕಟ್

ವಿಶೇಷವಾಗಿ ಸ್ಥಳೀಯ ಮಟ್ಟಿಗೆ, ಪುರುಷರ ಹೇರ್‌ಸ್ಟೈಲ್ ಬಗ್ಗೆ ಚಾಲ್ತಿಯಲ್ಲಿದ್ದ ಕ್ರೇಜ್ ದುಪ್ಪಟ್ಟಾಗಿದ್ದು, ಕೆಜಿಎಫ್ ಪಾರ್ಟ್ 1– ಪಾರ್ಟ್ 2 ಸಿನಿಮಾ ವರ್ಲ್ಡ್ ವೈಡ್ ಸೂಪರ್ ಹಿಟ್ ಆದ ಬಳಿಕ ಅಂದರೆ ತಪ್ಪಾಗದು. ಅದಕ್ಕೆ ಕಾರಣ ಸಿನಿಮಾದಷ್ಟೇ ಆಕರ್ಷಣೆ ಗಿಟ್ಟಿಸಿದ್ದ ಆ ಸಿನಿಮಾದ ಹಲವು ಪಾತ್ರಧಾರಿಗಳ ವಿಭಿನ್ನ ಕೇಶವಿನ್ಯಾಸ. ‘ಕೆಜಿಎಫ್’ನಲ್ಲಿನ ನಟ ಯಶ್ ಹೇರ್‌ಸ್ಟೈಲ್ ಅಂತೂ ಈಗಲೂ ಟ್ರೆಂಡಿಂಗ್‌ನ ಸಾಲಿನಲ್ಲಿ ನಿಲ್ಲುತ್ತದೆ. ಉದ್ದವಾಗಿ ಕೂದಲು ಬಿಡುವುದು ಮತ್ತು ಅದಕ್ಕೆ ಪೂರಕವಾಗಿ ಗಡ್ಡವನ್ನು ಬಿಡುವುದು ರೆಟ್ರೊ ಸ್ಟೈಲ್ ಜೊತೆಗೆ ಮಾಸ್ ಲುಕ್ ನೀಡುತ್ತದೆ.

## ಪೆಪ್ಪರ್ ಆ್ಯಂಡ್ ಸಾಲ್ಟ್ ಕಟ್

ಹೇರ್ ಕಲರಿಂಗ್‌ನಲ್ಲಿ ಆಸಕ್ತಿವುಳ್ಳವರು ಅಥವಾ ಹರೆಯ ವಯಸ್ಸಿನಲ್ಲೇ ತಲೆಗೂದಲು ಬಿಳುಪಾಗಿ ಅದನ್ನು ಮರೆಮಾಚಲು ಬಯಸುವವರು ಪೆಪ್ಪರ್ ಆ್ಯಂಡ್ ಸಾಲ್ಟ್ ಕಟ್ ಸೂಕ್ತ. ಬಿಳಿ ಕೂದಲನ್ನು ಹೊಂದಿರುವ ಹರೆಯದವರು ತಮ್ಮ ತಲೆಗೂದಲಿಗೆ ಕಪ್ಪು ಬಣ್ಣವನ್ನು ಹಾಕಿಸುತ್ತಾರೆ. ಆದರೆ ಇದರಲ್ಲಿ ಕೊಂಚ ರಂಗಿನ ಅಭಿರುಚಿ ಉಳ್ಳವರು 30ರ ವಯಸ್ಸಿನ ನಂತರದವರು ತಮಗಿಷ್ಟದ ಕೇಶ ವಿನ್ಯಾಸ ಮಾಡಿಸಿಕೊಂಡು ಬಿಳಿಗೂದಲಿಗೆ ಪೂರಕವಾಗಿ ಗ್ರೇ ಕಲರಿಂಗ್ ಅನ್ನು ಮಾಡಿಸಿಕೊಳ್ಳುತ್ತಾರೆ. ಇದುವೇ ಪೆಪ್ಪರ್ ಆ್ಯಂಡ್ ಸಾಲ್ಟ್ ಕಟ್. ಸಹಜವಾಗಿ ಕಾಣುವುದಕ್ಕಿಂತ ತೀರಾ ವಿಭಿನ್ನವಾಗಿ ಜನರೆದುರು ಗುರುತಿಸಿಕೊಳ್ಳುತ್ತಾರೆ.

> ಟ್ರೆಂಡಿಂಗ್‌ನಲ್ಲಿರುವ ಹೇರ್‌ಸ್ಟೈಲ್ ಅನ್ನು ಎಲ್ಲರೂ ಮಾಡಿಸುವುದು ಅಷ್ಟು ಸೂಕ್ತವಲ್ಲ. ಅದು ನಮ್ಮನ್ನು ಮುಜುಗರಕ್ಕೀಡು ಮಾಡಬಹುದು. ಮುಖದ ಆಕಾರಕ್ಕೆ ತಕ್ಕಂತೆ ಹೇರ್‌ಕಟ್ ಮಾಡಿಸುವುದು ನಮ್ಮ ಲುಕ್‌ಗೆ ವಿಶೇಷ ಮೆರುಗು ನೀಡುತ್ತದೆ. ಎಲ್ಲರಿಗೂ ಎಲ್ಲಾ ಬಗೆಯ ಹೇರ್‌ಕಟ್ ಹೊಂದುವುದಿಲ್ಲ ಎಂಬುದನ್ನು ಸೂಕ್ಷ್ಮವಾಗಿ ಪಡ್ಡೆಹೈಕಳು ಮನದಟ್ಟುಮಾಡಿಕೊಳ್ಳಬೇಕು. ಕೇಶವಿನ್ಯಾಸಕರ ಸಲಹೆ ಮೇರೆಗೆ ತಮ್ಮ ಮುಖದ ಆಕಾರಕ್ಕೆ ತಕ್ಕವಾದ ಕಟ್ ಮಾಡಿಸಿಕೊಳ್ಳುವುದು ಸೂಕ್ತ.
>
> **-ರವಿ ವಂಶಿ**, ಕೇಶವಿನ್ಯಾಸಕ

